ಬಳಕೆಯಾಗಿರುವುದನ್ನು ಯಾರಾದರೂ ಗಮನಿಸಬಹುದಾಗಿದೆ.

ಕನ್ನಡ ಭಾಷೆಯಲ್ಲಿ ಕೆಲವೊಮ್ಮೆ ಏಕಾಕ್ಷರಗಳೇ ಪದಸಂವಹನಗಳಾಗಿ ಬಳಕೆಯಾಗುತ್ತವೆ. ಉದಾಹರಣೆಗೆ: ಆ ಮತ್ತು ಈ. 'ಆ' ಎನ್ನುವುದು ಸನಿಹದಲ್ಲಿಲ್ಲದೆ ದೂರದಲ್ಲಿರುವುದನ್ನೂ, 'ಈ' ಎನ್ನುವುದು ದೂರದಲ್ಲಿಲ್ಲದೆ ಸನಿಹದಲ್ಲಿರುವುದನ್ನು ತಾನೆ ತಾನಾಗಿ ಸೂಚಿಸುತ್ತವೆ. ಅಂತೆಯೇ 'ಓ' ಎನ್ನುವ ಉದ್ಗಾರೋಕ್ತಿಯೂ ಬಳಕೆಯಲ್ಲಿದ್ದು, ಕುವೆಂಪು ವಾಙ್ಮಯದಲ್ಲಿ ಚಮತ್ಕಾರಭರಿತವಾಗಿ ಮತ್ತು ವೈವಿಧ್ಯಮಯವಾಗಿ ಪ್ರಯೋಗವಾಗಿರುವುದನ್ನು ಗುರುತಿಸಬಹುದು.

ಕುವೆಂಪು ಅವರ ಕಾವ್ಯತಪಸ್ಸಿನ ಫಲವಾಗಿರುವ 'ಶ್ರೀರಾಮಾಯಣ ದರ್ಶನಂ' ಕಿಷ್ಕಿಂಧಾ ಸಂಪುಟದಲ್ಲಿನ ಎರಡನೇ ಸಂಚಿಕೆಯ ಹೆಸರು 'ಓ ಲಕ್ಷ್ಮಣಾ!' ಎಂದೇ ಇದೆ. ಇದರ ಹಿನ್ನೆಲೆಯ ವಿವರವನ್ನು ಅವರ ಆತ್ಮಚರಿತ್ರೆಯಲ್ಲಿ ಹೀಗೆ ಹೇಳಲಾಗಿದೆ: "ನನ್ನ ಶ್ರೀರಾಮಾಯಣ ದರ್ಶನಂ ಮಹಾಕಾವ್ಯದಲ್ಲಿ ಒಂದು ಮಹೋನ್ನತ ಶಿಖರವಾಗಿರುವ ಸಂಚಿಕೆಗೆ ನಾನು ಕೊಟ್ಟಿರುವ ಹೆಸರು ನೇರವಾಗಿ ನನ್ನ ಅವ್ವನಿಂದಲೆ ಬಂದುದಾಗಿದೆ. ಅವ್ವ ಯಾವುದಾದರೂ ತನಗೊದಗಿದ ಕಷ್ಟದ ಸಮಯದಲ್ಲಿ ಬೇರೆ ಯಾರಾದರೂ ತನ್ನಿಂದ ಏನಾದರೂ ಆಗಬೇಕೆಂದು ಕೇಳಿದಾಗ, 'ಅಯ್ಯೋ ನಾನೇ ಓ ಲಕ್ಷ್ಮಣಾ! ಅಂತಿದ್ದೀನಪ್ಪಾ!' ಎಂದು ಹೇಳುತ್ತಿದ್ದುದನ್ನು ನಾನು ಎಷ್ಟೋ ಬಾರಿ ಕೇಳಿದ್ದೆ. ಹಾಗಾಗಿ 'ಓ ಲಕ್ಷ್ಮಣಾ!' ಎಂಬುದು ಏನೋ ಒಂದು ಕಷ್ಟಕ್ಕೋ, ಗೋಳಿಗೋ, ದುರಂತಕ್ಕೋ ವಾಕ್‌ಪ್ರತಿಮೆಯಾಗಿ ಬಿಟ್ಟಿತ್ತು ನನ್ನ ಅಂತಃಪ್ರಜ್ಞೆಯಲ್ಲಿ".

'ಶ್ರೀರಾಮಾಯಣ ದರ್ಶನಂ'ನಲ್ಲಿ ಶೀರ್ಷಿಕೆ 'ಓ ಲಕ್ಷ್ಮಣಾ'- ಬೇರೆಬೇರೆ ವ್ಯಕ್ತಿಗಳಿಂದ ಧ್ವನಿ ಪ್ರತಿಧ್ವನಿಯಾಗಿ ಹೊಮ್ಮಿ, ಮಹಾಗೋಳಿಗೆ ಒಂದು 'ಶಬ್ದ ಪ್ರತೀಕ'ವಾಗಿ ಬಿಟ್ಟಿದೆ. ರಾವಣನ ಮಾವ ಮಾರೀಚನ ಮಾಯೆಯನ್ನು ರಾಮನುಲಿ ಎಂದೇ ಭ್ರಮಿಸುವ ಸೀತೆ, ಲಕ್ಷ್ಮಣನ ಮಾತು ಕೇಳದೆ ಸಂಕಷ್ಟಕ್ಕೆ ಸಿಲುಕಿ, ಕೊನೆಗೆ 'ಓ ಲಕ್ಷ್ಮಣಾ!' ಎನ್ನುವ ನೀಳ್ದನಿಯ ಆರ್ತಸ್ವರದ ಅಸಹಾಯಕ ಸ್ಥಿತಿಗೆ ತಲುಪಿದ್ದನ್ನು ಬಹುಶ್ಲೇಷೆಯಂತೆ ಚಿತ್ರಿಸಲಾಗಿದೆ. ಮಾರೀಚ, ಸೀತೆ, ರಾಮ ಮತ್ತು ಸ್ವತಃ ಲಕ್ಷ್ಮಣನೂ ತನಗೆ ತಾನೇ 'ಓ ಲಕ್ಷ್ಮಣಾ!' ಎಂದು ತನ್ನ ಹಣೆಬರಹವನ್ನು ಶಪಿಸಿ ಕೊಳ್ಳಬೇಕಾಗುತ್ತದೆ.

ಸೀತೆ ಹಿಂದೆಯೂ 'ಓ' ಉಲಿಯನ್ನಾಡಬೇಕಾದ ಪ್ರಸಂಗ ಬಂದೊದಗಿತ್ತು. ಅದು ಹರಧನುಸ್ಸನ್ನು ಎತ್ತುವಾಗ 'ರಾವಣನಿಗೆ ಬೀಗು, ರಾಮನಿಗೆ ಬಾಗು' ಎಂದು ಧನುವಿನಲ್ಲಿ ಆಪ್ತಸ್ವರದಿಂದ ಪ್ರಾರ್ಥಿಸಿಕೊಳ್ಳುವುದು. ಈ 'ಓ' ದಶರಥನ ಪಾಲಿಗೂ ಬಂದೆರಗಿದೆ. ದಶರಥ ತನ್ನ ಕಣ್ಣುಗಳನ್ನು ತಾನೇ ಕಿತ್ತುಕೊಂಡು ಅಂಧತಾಪಸಿ ಮತ್ತು ಅಭಿರಾಮರನ್ನು ಕರೆಯುವಾಗ 'ಓ' ಎಂಬ ಗೋಳ್ದನಿಯಲ್ಲಿ ಬಾಯಿ ಬಡಿದುಕೊಳ್ಳುವುದುಂಟು. ಇದಕ್ಕಿಂತ ಮುಖ್ಯವಾಗಿ ಈ 'ಓ' ಉಕ್ತಿವೈಚಿತ್ರ್ಯ ಕಡಿದಾದ ಗೋಳ್ದನಿಯಾಗುವುದು ಮಂಥರೆಯ ಅರಣ್ಯರೋದನದಲ್ಲಿ. 'ಓ ನನ್ನ ಭರತನಣ್ಣಯ್ಯ! ಓ ರಾಮಯ್ಯ! ಹೇಳೆಲ್ಲಿರುವೆಯಯ್ಯ? ದಮ್ಮಯ್ಯ!' ಎಂದು ಕಾಡಿನಲ್ಲಿ ಭರತನಣ್ಣಯ್ಯನನ್ನು ಹುಡುಕುತ್ತ ಕಣ್ಣೀರು ಕುಡಿಯುವ ಪ್ರಸಂಗದಲ್ಲಿ ತೀವ್ರವಾದ ಗೋಳ್ದನಿಯಾಗಿ ವ್ಯಕ್ತವಾಗಿದೆ. ಸ್ವತಃ ಕವಿಯೂ ಈ 'ಓ' ಉಲಿಯಿಂದ ಪಾರಾಗಲು ಸಾಧ್ಯವಾಗದೆ 'ಓ ಪತಿತೆ', 'ಓ ಕುಬ್ಜೆ', 'ಓ ಮಂಥರೆಯೆ' ಎಂದು ಕವಿಸಹಜ ಕರುಣೆಯಿಂದ ಕೂಗಿ ಕರೆದು ಮರುಗುತ್ತಾರೆ.

ಉದ್ಧರಿಸಿರುವ ಉಕ್ತಿಗಳು ಯಾದೃಚ್ಛಿಕವಾಗಿ ಎತ್ತಿಕೊಂಡವಷ್ಟೆ. 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದ ಉದ್ದಕ್ಕೂ 'ಓ' ಎಂಬ ಉಕ್ತಿ ಆರ್ತಸ್ವರವಾಗಿ ಮತ್ತೆಮತ್ತೆ ಕಾಣಿಸಿಕೊಳ್ಳುತ್ತದೆ. ಕುವೆಂಪು ಅವರ ತಾಯಿ, ಮೈದುನನನ್ನು (ಅಂದರೆ ಕುವೆಂಪು ಅವರ ಚಿಕ್ಕಪ್ಪ) ಅವಲಂಬಿಸಿ ಬದುಕಬೇಕಿತ್ತು. ಆದ್ದರಿಂದಲೇ ಅವಳ ಸ್ಥಿತಿ ರಾಮನನ್ನು ಕಳೆದುಕೊಂಡು ಕಡುಕಷ್ಟದಲ್ಲಿ ಸಿಲುಕಿದ ಸೀತೆಯಂತಿದ್ದು, ಪ್ರತಿಯೊಂದಕ್ಕೂ ತಮ್ಮ ಮೈದುನನಿಗೆ ಕೈಚಾಚ ಬೇಕಾಗಿದ್ದರಿಂದ 'ಓ ಲಕ್ಷ್ಮಣಾ!' ಎನ್ನುವುದು ಪರಾವಲಂಬಿ ಬದುಕಿನ ಲಯದೊಳಗಿನ ನುಡಿಗಟ್ಟಾಗಿ ಪರಿವರ್ತನೆಯಾಗಿತ್ತು.